ಶ್ರೀ ಕೆ. ಎನ್. ವೀರಪ್ಪಗೌಡ.—ಈಗ ಕಾಫಿ ಬೆಳೆ ಬೆಳೆಯತಕ್ಕ ಜನರಿಗೆ ಕಾಫಿ ಡೋರ್ಡಿನವರು ಲ್ಯಾಂಡ್ ಸರ್ಟಿಫಿಕೇಟ್ ಕೊಡಬೇಕೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಕಾಫಿ ಎಸ್ಟೇಟ್ಸ್ ಇರುವುದು ತಮ್ಮ ಗಮನದಲ್ಲಿ ಇರಬಹುದು. ಹಾಗಿರುವಾಗ ಜಿಲ್ಲಾಧಿಕಾರಿಗಳಿಗೆ ಹೆಚ್ಚು ಕಡಿಮೆ ಈ ಅಧಿಕಾರವನ್ನು ಕೊಟ್ಟಿದ್ದರಿಂದ ಇನ್‌ಜಸ್ಟೀಸ್ ಆಗುತ್ತದೆಂಬುದು ತಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಈಗ ಕಾಫಿ ರಿಜಿಸ್ಟ್ರೇಷನ್ ಆಕ್ಟ್ ಎಂದು ಒಂದು ಸೆಂಟ್ರಲ್ ಆಕ್ಟ್ ಇದೆ. ಆ ಪ್ರಕಾರವಾಗಿ ಡೆಪ್ಯುಟಿ ಕಮಿಷನರುಗಳು ಕಾಫಿ ಬೆಳೆಯುವುದಕ್ಕೆ ಜಮೀನು ಲಾಯ್ ಕ್ಕಾಗಿದೆಯೇ ಎಂದು ನೋಡುತ್ತಾರೆ. ಮೂರು ವರ್ಷಗಳ ಅವಧಿಯೊಳಗೆ ಕಾಫಿ ಬೆಳೆಗೆ ಹೊಸದಾಗಿ ಭೂಮಿ ಕೊಡಬೇಕೆಂದೂ, ಆ ಬೆಳೆ ಇಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನು ಡೆಪ್ಯುಟಿ ಕಮಿಷನರ್ ನೋಡಿ ಸರ್ಟಿಫಿಕೇಟ್ ಕೊಟ್ಟಮೇಲೆ ಅವನಿಗೆ ಭೂಮಿಯನ್ನು ಕನ್‌ಫರ್ಮ್ ಮಾಡಬೇಕಾಗುತ್ತದೆ. ಈಗ ಕೊಡುವ ರೀತಿಯಲ್ಲಿ ಅವನಿಗೆ ಲೀಜ್ ರೂಪದಲ್ಲಿ ಕೊಟ್ಟಿದೆ. ಮೂರು ವರ್ಷಗಳೊಳಗೆ ಈ ಬೆಳೆ ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಡೆಪ್ಯುಟಿ ಕಮಿಷನರ್ ವಿಶೇಷ ಕಾರಣಗಳಿಂದ ಐದು ವರ್ಷಗಳವರೆಗೆ ಜಾಸ್ತಿ ವಾಯಿದೆಯನ್ನು ಹೆಚ್ಚಿಸಿ ಇಪ್ಪೇ ಎಂದು ನಿಗದಿಮಾಡುತ್ತಾರೆ. ಅದು ಗೊತ್ತಾದಮೇಲೆ ಅದನ್ನು ಕನ್‌ಫರ್ಮ್ ಮಾಡುವುದು ಆಗುತ್ತದೆ. ಉಳಿದ ಸೌಕರ್ಯಗಳನ್ನು ಸರ್ಕಾರದಿಂದ ಒದಗಿಸಲಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಮೂರು ವರ್ಷಗಳೊಳಗೆ ಡೆಪ್ಯುಟಿ ಕಮಿಷನರ್ ಸಾಗುವಳಿ ಚೀಟಿಯನ್ನು ಕೊಡದೇ ಇದ್ದರೆ ಲೀಜ್ ಬೇಸಿಸ್ ಮೇಲೆ ಕೊಟ್ಟಿರುತ್ತಾರೆ. ಒಂದು ಎಕರೆ ಒಂದು ಸಾವಿರ ರೂಪಾಯಿ ಗಳಷ್ಟು ದುಡ್ಡು ಬೇಕಾಗುತ್ತದೆ. ಆದ್ದರಿಂದ ಸಾಲ ಪಡೆಯುವುದಕ್ಕೆ ಬ್ಯಾಂಕುಗಳಲ್ಲಿ ಸಾಧ್ಯವಿಲ್ಲ. ಆದ್ದರಿಂದ ಒಂದೇ ಸಾರಿ ಕಾಫಿ ಬೆಳೆಗಾರರಿಂದ ಹಣ ತೆಗೆದುಕೊಂಡು ಖಾಯಂ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ರೀತಿ ಕಾಫಿ ಬೆಳೆಯುವ ಭೂಮಿಯನ್ನು ಪಡೆಯಲು ನೇರವಾಗಿ ಔಟ್‌ರೇಟ್ ಗ್ರಾಂಟ್ ಕೊಟ್ಟು ಅದು ದುರುಪಯೋಗವಾಗಿರುವುದರಿಂದಲೇ, ಸರ್ಕಾರ ಅದನ್ನು ಈಗ ಲೀಜ್ ರೂಪವಾಗಿ ಕೊಟ್ಟಿರುವುದು. ಆ ರೀತಿಯಾಗಿ ಸರ್ಕಾರ ಲೀಜ್ ಕೊಟ್ಟಿರುವ ಕಾಲದಿಂದ ಅಭಿವೃದ್ಧಿ ಬ್ಯಾಂಕಿನಿಂದ ಅಥವಾ ಸರ್ಕಾರದಿಂದ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದರಿಂದ ಇದನ್ನು ಮೊಟ್ಟಮೊದಲು ಔಟ್‌ರೇಟ್ ಗ್ರಾಂಟಿನಲ್ಲಿ ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರ ಈ ಕ್ರಮವನ್ನು ಕೈಗೊಂಡಿದೆ.

## LOAN TAKEN BY CITY MUNICIPAL COUNCIL, GULBARGA.

457. SRI MALLIKARJUNA (Gurmitkal).—

Will the Minister for Municipal Administration be pleased to state .—

The total amount of loan taken by the City Municipal Council, Gulbarga from Government during the last three years *i.e.*, from 1969 to 1971 ?

SRI B. BASAVALINGAPPA.—Minister for Municipal Administration.

Nil.

SRI MALLIKARJUNA.—Whether the Government has received any information that the Municipality has received a loan of Rs. one crore from LIC and its misutilisation by the President ?

‡SRI BASAVALINGAPPA.—No Sir. Government has stood guarantee for the loan taken by the Municipality from the LIC.

SRI MALLIKARJUNA.—Have you received any complaints regarding the misappropriation of the Municipalitys funds ?

SRI B. BASAVALINGAPPA.—There are several representations which are now being received by the Government and we have not actually known what is the misappropriation.

SRI D. B. KALMANKAR.—In view of the representations received whether the Government will make efforts to see whether there has been any misappropriation in the amounts ?

SRI B. BASAVALINGAPPA.—Government will take necessary steps if there is any misappropriation of the public funds by the Municipality.

SRI BAPU GOWDA RAYAPPA.—What is the amount received by the Gulbarga Municipality from the LIC and how much has been utilised and for what purpose ?

SKI B. BASAVALINGAPPA.—The Municipality has received Rs. 10 lakhs from the LIC and it is being utilised for the purpose of water supply scheme.

SRI C. N. PATIL.—Whether any amount has been spent last year for the bore-wells and also for fixing up pumpsets and for this purpose whether the Government or the Municipality has spent any amount ?

SRI B. BASAVALINGAPPA.—The Government have as a last resort compelled to spend this money for providing barewells because the Municipality refused to take up this responsibility.

ಶ್ರೀ ವಿ. ಎನ್. ಪಾಟೀಲ್.—ಈಗ ತಮ್ಮ ಕಡೆಗೆ ಎಷ್ಟು ದೂರುಗಳು, ಯಾವ ತರಹೆ ದೂರುಗಳು ಬಂದಿವೆ ? ಪ್ರೆಸಿಡೆಂಟರ ಬಗ್ಗೆ ಏನು ದೂರುಗಳು ಬಂದಿವೆ ? ಈ ದೂರುಗಳನ್ನು ವಿಚಾರ ಮಾಡ ಬೇಕಾದರೆ ರುಜುಹಾಕಿ ಅರ್ಜಿಗಳನ್ನು ಕಳುಹಿಸಬೇಕೇ ಅಥವಾ ಅನಾನಿಮಸ್ಸಾಗಿ ಕಳುಹಿಸಿದರೂ ನಡೆಯುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ರುಜು ಹಾಕಿದ ಅರ್ಜಿಗಳ ಬಗ್ಗೆ ಸರ್ಕಾರ ಗಮನ ಕೊಡುತ್ತೆ ಪ್ರೆಸಿಡೆಂಟರ ಬಗ್ಗೆ ಏನು ಆಪಾದನೆಗಳು ಬಂದಿವೆ ಅನ್ನುವುದಿಕ್ಕೆ ಬೇರೆ ಪ್ರಶ್ನೆ ಕಳುಹಿಸಿ. ಆಗ ಅದಕ್ಕೆ ಉತ್ತರವನ್ನು ಒದಗಿಸಲಾಗುತ್ತದೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಗುಲ್ಬರ್ಗ ಮುನಿಸಿಪ್ಯಾಲಿಟಿಯವರು ಸಾಲ ಕೇಳಿದರೆ ಕೊಡುವುದಿಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ —ಅವರಿಗೆ ಸಾಲ ಕೊಟ್ಟರೆ ಅದನ್ನು ವಾಪಸ್ ಕೊಡತಕ್ಕ ಪದ್ಧತಿ ಅವರಲ್ಲಿಲ್ಲ ಆದುದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ.

SRI J. P. SARVESH.—Just now the Hon. Minister said that many complaints have been received by Government against the Municipality. Will the Minister assure this House that he would send special auditors to enquire into the allegations ?

SRI B. BASAVALINGAPPA.—Government will look into it.

SRI MALLIKARJUNA.—When the Municipality has failed to give the basic needs to the citizens, whether they will supersede the Municipality ?

SRI B. BASAVALINGAPPA.—We cannot consider the question of superseding it unless the allegations are enquired into and they are proved to be true.